# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 269(303) |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ. ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 29-01-2026 |
| ಉತ್ತರಿಸುವವರು | ಮುಖ್ಯಮಂತ್ರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 'ಜನಸೇವಕ' ಮತ್ತು 'ಕರ್ನಾಟಕ ಒನ್' ಯೋಜನೆಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ವಿಸ್ತರಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ: | 'ಜನಸೇವಕ' ಮತ್ತು 'ಕರ್ನಾಟಕ ಒನ್ ಯೋಜನೆಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ವಿಸ್ತರಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತಡೆಗಟ್ಟಲು ಮತ್ತು ಪಾರದರ್ಶಕತೆ ತರಲು 'ಇ-ಆಫೀಸ್' (e-office) ವ್ಯವಸ್ಥೆಯನ್ನು ಶೇ.100 ರಷ್ಟು ಜಾರಿಗೊಳಿಸಲಾಗಿದೆಯೇ: | ಪ್ರಸ್ತುತ 11,218 ಸರ್ಕಾರಿ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇನ್ನುಳಿದ ಸರ್ಕಾರಿ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶದ ಅನುಷ್ಠಾನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| ಇ) | 'ಸಕಾಲ' ಯೋಜನೆಯಡಿ ಸಾರ್ವಜನಿಕರಿಗೆ ಸೇವೆ ನೀಡುವಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು? | 'ಸಕಾಲ' ಯೋಜನೆಯಡಿ ಸಕಾಲ ಅಧಿಸೂಚಿತ ಸೇವೆಗಳನ್ನು ನಾಗರಿಕರಿಗೆ ನೀಡುವಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಸಕಾಲ ಅಧಿಸೂಚಿತ ಸೇವೆಗಳ ವಿತರಣೆ ಕೋರಿ ನಾಗರಿಕರಿಂದ ಸಲ್ಲಿಸಲ್ಪಡುವ ಪ್ರತಿಯೊಂದು ಅರ್ಜಿಗೆ 15 ಅಂಕಿಯುಳ್ಳ ಸಕಾಲ ಸ್ವೀಕೃತಿ ಸಂಖ್ಯೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ಅರ್ಜಿಗಳ ವಸ್ತು ಸ್ಥಿತಿಯನ್ನು ಆನ್‌ಲೈನ್ (Digital Tracking) ಮೂಲಕ ತಿಳಿದುಕೊಳ್ಳಬಹುದಾಗಿರುತ್ತದೆ<br>2. ಸಕಾಲ ಅಧಿಸೂಚಿತ ಸೇವೆಗಳನ್ನು ಸಾರ್ವಜನಿಕರಿಗೆ ಹೆಚ್ಚು ಪರಿಣಾಮಕಾರಿಯಾಗಿ ತಲುಪಿಸಲು ಅನುವಾಗುವಂತೆ ಎಲ್ಲಾ ಜಿಲ್ಲೆಗಳಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಕಾಲ ಸಮನ್ವಯ ಸಮಿತಿಯ ಮೂಲ ತಂಡ (ಕೋರ್ ಟೀಮ್) ಹಾಗೂ ಸಕಾಲ ಸಮನ್ವಯ ಪೂರ್ಣ ಸಮಿತಿಯ ಸಂಯೋಜನೆಯನ್ನು ರಚಿಸಲಾಗಿದೆ.<br>3. ಸಕಾಲ ಅಧಿಸೂಚಿತ ಸೇವೆಗಳಲ್ಲಿ ತಿರಸ್ಕೃತಿ ದರವನ್ನು ಕಡಿಮೆಗೊಳಿಸುವ ಮುಖ್ಯ ಉದ್ದೇಶದಿಂದ ಹಾಗೂ ನಾಗರಿಕರಿಗೆ ತಮ್ಮ ಸೇವಾ ಅರ್ಜಿಗಳ ಕುರಿತು ಅವಶ್ಯಕ ಕ್ರಮ ಕೈಗೊಳ್ಳಲು ಹಾಗೂ ಶುಲ್ಕ ಪಾವತಿಗೆ ನಿರ್ದಿಷ್ಟ ಕಾಲಾವಕಾಶವನ್ನು ಒದಗಿಸುವ ಉದ್ದೇಶದಿಂದ ಪಾರ್ಕಿಂಗ್ ಸೌಲಭ್ಯವನ್ನು ಜಾರಿಗೆ ತರಲಾಗಿದೆ.<br>4. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ 2014 ರ ಕಲಂ 9 ರನ್ವಯ ನಾಗರಿಕ ಸೇವಾ ಅರ್ಜಿಗಳನ್ನು ಇತ್ಯರ್ಥಪಡಿಸುವುದನ್ನು ಹೆಸರಿಸಲಾದ ಅಧಿಕಾರಿಗಳು ವಿಳಂಬ ಮಾಡಿದ ಪ್ರಕರಣಗಳಲ್ಲಿ ಸಕಾಲ ಅಪೀಲುಗಳನ್ನು ದಾಖಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. |

| | | |
|---|---|---|
| | | 5. **ಸಕಾಲ ಮೇಲ್ಮನವಿ ಪ್ರಾಂಪ್ಟ್ SMS**- ಸಕಾಲದಲ್ಲಿ ಮೇಲ್ಮನವಿಗಳನ್ನು ಹೆಚ್ಚಿಸುವ ಉಪಕ್ರಮ ಇದಾಗಿದ್ದು, ಸಕಾಲ ಸೇವಾ ಅರ್ಜಿಗೆ ಮೇಲ್ಮನವಿ ಸಲ್ಲಿಸಬಹುದಾದ ಪರಿಸ್ಥಿತಿ ಬಂದ ತಕ್ಷಣ ಅರ್ಜಿದಾರರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಮೇಲ್ಮನವಿ ಸಲ್ಲಿಸಲು ಲಿಂಕ್ ಕಳುಹಿಸಲಾಗುತ್ತದೆ.<br><br>6. **ಮೇಲ್ಮನವಿ ವಿಲೇವಾರಿ ಅನುಸರಣಾ SMS**- ಮೇಲ್ಮನವಿ ಸಲ್ಲಿಸಿದ ಸಮಯದಲ್ಲಿ ಮತ್ತು ಸದರಿ ಮೇಲ್ಮನವಿಯ ನಿಗದಿತ ಸಮಯ ಮುಗಿಯುವ ಮೊದಲು ಕೊನೆಯ ದಿನದಂದು ಅನುಸರಣಾ Text ಸಂದೇಶವನ್ನು ಸಕ್ಷಮ ಅಧಿಕಾರಿಗಳು /ಮೇಲ್ಮನವಿ ಪ್ರಾಧಿಕಾರಿಗಳ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆ.<br>7. **ತಿರಸ್ಕೃತಿಗೆ ಕಾರಣಗಳ ಮಾಡ್ಯೂಲ್**- ಸಕಾಲ ಕಾಯ್ದೆಯ ಕಲಂ 5 (2)ರಂತೆ ಹೆಸರಿಸಲಾದ ಅಧಿಕಾರಿಗಳು ಸಕಾಲ ಅರ್ಜಿಯನ್ನು ತಿರಸ್ಕರಿಸಬೇಕಾದ ಸಂದರ್ಭದಲ್ಲಿ ನಿರ್ದಿಷ್ಟ ಕಾರಣದೊಂದಿಗೆ ಮಾತ್ರ ತಿರಸ್ಕರಿಸಬೇಕಾಗಿರುತ್ತದೆ. ಸಕಾಲ ಕಾಯ್ದೆಯ ಈ ನಿಬಂಧನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ತಂತ್ರಾಂಶದಲ್ಲಿ ಪ್ರತಿ ಸಕಾಲ ಅಧಿಸೂಚಿತ ಸೇವೆಗೆ ಪೂರ್ವ ನಿರ್ಧರಿತ ಪ್ರಾಥಮಿಕ ಮತ್ತು ದ್ವಿತೀಯ ಕಾರಣಗಳೊಂದಿಗೆ Drop down /Check Box Menu ಗಳನ್ನು ಅಳವಡಿಸಲಾಗಿದೆ, |

**ಕಡತ ಸಂಖ್ಯೆ: ಸಿಆಸುಇ 16 ಇಜಿಎಂ 2026**

**(ಸಿದ್ಧರಾಮಯ್ಯ)**
**ಮುಖ್ಯಮಂತ್ರಿ**